ದಾರಿಯಾಗಿತ್ತು. ಆದರೆ ಈಗ ಇದಕ್ಕೂ ಶಸ್ತ್ರಚಿಕಿತ್ಸೆ ಅಗತ್ಯವಿಲ್ಲದ ಅತ್ಯಾಧುನಿಕ ಚಿಕಿತ್ಸಾ ಸಾಧನಗಳು ಬಂದಿವೆ. ವೈದ್ಯಕೀಯ ವಲಯದಲ್ಲಿ ಹಲವು ಅಭೂತಪೂರ್ವ ಬದಲಾವಣೆಗಳಾಗಿವೆ. ಈ ನಿಟ್ಟಿನಲ್ಲಿ ಇನ್ನಷ್ಟು ತಂತ್ರಜ್ಞಾನ ಸುಧಾರಣೆಗಳೂ ನಡೆದಿವೆ' ಎಂದು ವಿವರ ನೀಡುತ್ತಾರೆ ಡಾ.ನಟರಾಜ್.

## ಕಿಡ್ನಿ ಕಲ್ಲಿಗೆ ಸರಳ ಚಿಕಿತ್ಸೆ

ಕಿಡ್ನಿಯಲ್ಲಿ ಆಗುವ ಕಲ್ಲು ಸಾಮಾನ್ಯ ಸಮಸ್ಯೆಯೇ. ಆದರೆ ಇದಕ್ಕೆ ಸೂಕ್ತ ಚಿಕಿತ್ಸೆ ಇಲ್ಲದಿದ್ದರೆ ರೋಗಿ ನೋವಿನಿಂದ ನರಳಬೇಕಾಗುತ್ತದೆ. ಇದಕ್ಕೂ ಹಿಂದೆ ಶಸ್ತ್ರಚಿಕಿತ್ಸೆಯೊಂದೇ ದಾರಿಯಾಗಿತ್ತು. ಆದರೆ ಈಗ ಬಂದಿರುವ ಹೊಸ ಸಾಧನ ಕಿಡ್ನಿ ಕಲ್ಲು ಸಮಸ್ಯೆಯಿಂದ ಬಳಲುವವರಿಗೆ ವೈದ್ಯಲೋಕದ ವರದಾನ ಎಂದೇ ಹೇಳಬಹುದು.

'ಕಿಡ್ನಿ ಕಲ್ಲನ್ನು ಅತ್ಯಂತ ಸರಳವಾಗಿ ಹೋಗಿಸಿ ಎರಡೇ ದಿನದಲ್ಲಿ ಗುಣಮುಖನನ್ನಾಗಿ ಮಾಡಬಹುದು. ಇಂಥ ಹೊಸ ಸಾಧನ ಯುರೆತ್ರೋಸ್ಕೋಪ್ (Urethrscope) ಬಂದಿದೆ. ಈ ಸಾಧನದ ಮೂಲಕ ಕಿಡ್ನಿ ಕಲ್ಲು ಎಲ್ಲಿದೆ ಎಂಬುದನ್ನು ಪತ್ತೆ ಹಚ್ಚಿ ಬ್ಲಾಸ್ಟ್ ಮಾಡಲಾಗುತ್ತದೆ. ಇದರಿಂದ ಶಸ್ತ್ರಚಿಕಿತ್ಸೆಯ ನೋವು, ದೇಹಕ್ಕಾಗುವ ಆಘಾತ ಎಲ್ಲವನ್ನೂ ತಪ್ಪಿಸಿದಂತಾಗುತ್ತದೆ' ಎನ್ನುತ್ತಾರೆ ಬೆಂಗಳೂರಿನ ಶ್ರೀಲಕ್ಷ್ಮಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯೆ ಡಾ. ಬುಶ್ರಾ.

'ಕಿಡ್ನಿ ಕಲ್ಲು ನಿವಾರಣೆಗೆ ಆಸ್ಪತ್ರೆಗೆ ದಾಖಲಾದವರು ಚಿಕಿತ್ಸೆ ಬಳಿಕ ಒಂದೇ ದಿನದಲ್ಲಿ ಮನೆಗೆ ಮರಳಬಹುದು. ಯುಎಸ್‌ಜಿ ಹೊಟ್ಟೆಯ ಸ್ಕ್ಯಾನ್ ಮಾಡಿ ಕಲ್ಲು ಎಲ್ಲಿ, ಯಾವ ಭಾಗದಲ್ಲಿದೆ ಎಂಬುದು ತಿಳಿಯಬಹುದು. ಪೆಲ್ವಿಸ್, ಕಿಡ್ನಿ, ಮೂತ್ರನಾಳ.. ಹೀಗೆ ಎಲ್ಲಿ ಕಲ್ಲು ಇದೆ ಎಂಬುದನ್ನು ಸುಲಭವಾಗಿ ಪತ್ತೆ ಹಚ್ಚಬಹುದು. ಇದಕ್ಕೆ ಲೇಸರ್ ತಂತ್ರಜ್ಞಾನ ಬಳಸುತ್ತೇವೆ' ಎಂದು ವಿವರ ನೀಡುತ್ತಾರೆ ಡಾ. ಬುಶ್ರಾ.

## ಮಹಿಳೆಯರಿಗೆ ಲಸಿಕೆ

ಸ್ತ್ರೀರೋಗ ಮತ್ತು ಪ್ರಸೂತಿ ಕ್ಷೇತ್ರದ ಅಭೂತಪೂರ್ವ ಬದಲಾವಣೆ ಬಹುದೊಡ್ಡ ಸುಧಾರಣೆ ಎಂದೇ ಹೇಳಬೇಕು. ಮುಂದಿನ ಹತ್ತು ವರ್ಷಗಳಲ್ಲಿ ಇನ್ನೂ ಮಹತ್ತರ ಬದಲಾವಣೆಯನ್ನು ಈ ರಂಗದಲ್ಲಿ ಕಾಣಬಹುದು. ಮಹಿಳೆಯರು ಸಮಾಧಾನದ ನಿಟ್ಟುಸಿರು ಬಿಡಬಹುದು ಎಂಬ ಆಶಾವಾದವನ್ನು ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞರು ವ್ಯಕ್ತಪಡಿಸುತ್ತಿದ್ದಾರೆ.

'ಮಹಿಳೆಯರನ್ನು ಸರ್ವೇಸಾಮಾನ್ಯವಾಗಿ ಬಾಧಿಸುವ ಸರ್ವೈಕಲ್ ಕ್ಯಾನ್ಸರ್, ಸ್ತನ ಕ್ಯಾನ್ಸರ್ ಮುಂತಾದ ಸಮಸ್ಯೆಗಳಿಗೆ ಸ್ಕ್ರೀನಿಂಗ್ ಟೆಸ್ಟ್ ಬಂದಿದ್ದು, ಅತ್ಯಂತ ಸುಲಭವಾಗಿ ಈ ಕಾಯಿಲೆಗಳನ್ನು ಪತ್ತೆ ಹಚ್ಚಬಹುದು. ಪಾಪ್‌ಸ್ಮಿಯರ್ ಟೆಸ್ಟ್ ಹಿಂದೆಯೂ ಇತ್ತು, ಆದರೆ ಈಗ ಇನ್ನೂ ಅತ್ಯಾಧುನಿಕ ವಿಧಾನಗಳು ಬಂದಿದ್ದು ಇದನ್ನು ಮೂರು ವರ್ಷಕ್ಕೊಮ್ಮೆ ಮಾಡಿಸಿಕೊಂಡರೆ ಸಾಕು. ಒಮ್ಮೆ ಸ್ಕ್ರೀನಿಂಗ್ ಮಾಡಿಸಿಕೊಂಡರೆ ಶೇ.90ರಷ್ಟು ಕ್ಯಾನ್ಸರ್ ಚಿಹ್ನೆಗಳು ಪತ್ತೆಯಾಗುತ್ತವೆ. ಆದರೆ ಜನರಲ್ಲಿ ಅರಿವು ಇಲ್ಲದೇ ಇರುವ ಕಾರಣ ಈ ವೈದ್ಯಕೀಯ ಸೌಲಭ್ಯಗಳು ಮಹಿಳೆಯರನ್ನು ತಲುಪುವಲ್ಲಿ ವಿಳಂಬವಾಗುತ್ತಿವೆ' ಎಂದು ಹೇಳುತ್ತಾರೆ ಸ್ತ್ರೀರೋಗ ಮತ್ತು ಪ್ರಸೂತಿ ತಜ್ಞೆ ಡಾ. ಶಾಂತಲಾ ಅನಿಲ್.

'ಸರ್ವೈಕಲ್ ಕ್ಯಾನ್ಸರ್‌ಗೆ ಈಗ ಚುಚ್ಚುಮದ್ದು ಬಂದಿದೆ. ಇದು ಎಚ್‌ಪಿವಿ ವೈರಸ್‌ನಿಂದ ಬರುತ್ತದೆ ಎಂಬುದು ಗೊತ್ತಾಗಿದ್ದು, 13ರಿಂದ 18 ವರ್ಷದವರೆಗಿನ ಹದಿಹರೆಯದ ಹುಡುಗಿಯರು ಈ ಲಸಿಕೆ ಹಾಕಿಸಿಕೊಂಡರೆ ಮುಂದೆ ಬರಬಹುದು ಎನ್ನಲಾಗುವ ಸರ್ವೈಕಲ್ ಕ್ಯಾನ್ಸರ್ ಅನ್ನು ತಪ್ಪಿಸಿಕೊಳ್ಳಬಹುದು. ಇಂಗ್ಲೆಂಡ್, ಅಮೆರಿಕದಂತಹ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿ ಎಲ್ಲ ಮಹಿಳೆಯರೂ ಈ ಲಸಿಕೆ ಹಾಕಿಸಿಕೊಳ್ಳುತ್ತಿದ್ದಾರೆ. ಇಲ್ಲಿ ಈ ಬಗ್ಗೆ ಜಾಗೃತಿ ಇಲ್ಲದಿರುವ ಕಾರಣ ಇದು ಹೆಚ್ಚು ಜನಪ್ರಿಯವಾಗಿಲ್ಲ' ಎಂದು ಹೇಳುತ್ತಾರೆ ಡಾ. ಶಾಂತಲಾ.

ಟೆಸ್ಟ್ ಟ್ಯೂಬ್ ಬೇಬಿ, ಐವಿಎಫ್ ತಂತ್ರಜ್ಞಾನ ಮುಂತಾದ ಹತ್ತು ಹಲವು ವಿಧಾನಗಳೂ ಮಗುವನ್ನು ಬಯಸುವ ದಂಪತಿಗಳಿಗೆ ಲಭ್ಯವಿದೆ. ಗರ್ಭಧಾರಣೆಯ ಕ್ಷೇತ್ರದಲ್ಲಿ ಇನ್ನೂ ಅತ್ಯಾಧುನಿಕ ಸಾಧನ, ತಂತ್ರಜ್ಞಾನಗಳು ಮುಂದಿನ ದಿನಗಳಲ್ಲಿ ಬರಬಹುದು ಎಂಬುದು ವೈದ್ಯ ತಜ್ಞರ ಅಭಿಮತ.




ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಆರೋಗ್ಯ ಮೇಳದಲ್ಲಿ ಮಳಿಗೆಯೊಂದರಲ್ಲಿ ಪ್ರದರ್ಶನಗೊಂಡಿದ್ದ ಆಧುನಿಕ ಯಂತ್ರ ಚಿತ್ರ: ಸತೀಶ್ ಬಡಿಗೇರ

ಸ್ತನ ಕ್ಯಾನ್ಸರ್, ಸ್ತನದಲ್ಲಿ ಗಡ್ಡೆ ಮಹಿಳೆಯರು ಇತ್ತೀಚೆಗೆ ಎದುರಿಸುವ ಸಾಮಾನ್ಯ ಸವಾಲು. ಸ್ತನ ಗಡ್ಡೆ ಪತ್ತೆಗೆ ಈಗ ಅತ್ಯಾಧುನಿಕ ಸಾಧನ ಬಂದಿದೆ. ಬೆಂಗಳೂರಿನ 'ಮೈ ಕ್ಲಿನಿಕ್ ಕೇರ್' ಸಂಸ್ಥೆ ಸ್ತನದಲ್ಲಿ ಗಡ್ಡೆ ಪತ್ತೆ ಹಚ್ಚುವ 'ಐ ಬ್ರೆಸ್ಟ್ ಎಕ್ಸಾಂ' ಅನ್ನು ಪರಿಚಯಿಸಿದೆ. ಇದರಿಂದಾಗಿ ಆರಂಭಿಕ ಹಂತದಲ್ಲೇ ಕ್ಯಾನ್ಸರ್ ಪತ್ತೆ ಹಚ್ಚಲು ಸಾಧ್ಯ. ಯುವತಿಯರು ಕೂಡ ಇದರಿಂದ ಪರೀಕ್ಷೆ ಮಾಡಿಸಿಕೊಳ್ಳಬಹುದು. ಸಾಮಾನ್ಯವಾಗಿ 40 ವರ್ಷ ಮೇಲ್ಪಟ್ಟ ಮಹಿಳೆಯರು 'ಮ್ಯಾಮೊಗ್ರಾಮ್' ಮೂಲಕ ಪರೀಕ್ಷೆ ಮಾಡಿಸಿಕೊಳ್ಳುತ್ತಾರೆ. ಇದರಲ್ಲಿ ಕ್ಷಕಿರಣ ಹಾಯಿಸಬೇಕಾಗುತ್ತದೆ. ಇದನ್ನು ಪದೇ ಪದೇ ಮಾಡಿಸಿಕೊಂಡರೆ ಅಡ್ಡಪರಿಣಾಮಗಳೂ ಇಲ್ಲದಿಲ್ಲ. ಆದರೆ ಈ ಹೊಸ ಸಾಧನದ ಮೂಲಕ ಪ್ರತಿ ಆರು ತಿಂಗಳಿಗೊಮ್ಮೆ ಪರೀಕ್ಷೆ ಮಾಡಿಕೊಂಡರೆ ಯಾವುದೇ ಅಡ್ಡ ಪರಿಣಾಮ ಇರುವುದಿಲ್ಲ.

ದೇಹದ ಜೀವಕಣಗಳಲ್ಲಿ ಕ್ಯಾನ್ಸರ್‌ನ ಅಂಶಗಳು ಅಡಗಿವೆಯೇ ಎಂದು ಪತ್ತೆ ಹಚ್ಚಲು 'ಆರ್ಗನ್ಸ್ ಆನ್ ಚಿಪ್ಸ್ ಟೆಕ್ನಾಲಜಿ' ಎಂಬ ಮೈಕ್ರೊ ಚಿಪ್ಸ್ ತಂತ್ರಜ್ಞಾನ ವೈದ್ಯಲೋಕದ ಇತ್ತೀಚಿನ ಸಂಶೋಧನೆ. ದೇಹದ ಸ್ಟೆಮ್‌ಸ್ಟೆಲ್‌ಗಳೊಂದಿಗೆ ಚಿಪ್ ಅಳವಡಿಸಿದಾಗ ರೋಗಾಣುಗಳ ನಿಖರವಾದ ಪತ್ತೆ ಸಾಧ್ಯ ಎನ್ನುವುದು ಸಂಶೋಧಕರ ಅಭಿಪ್ರಾಯ.

ಲಂಡನ್‌ನ ರಾಯಲ್ ಆಸ್ಪತ್ರೆಯ ಕ್ಯಾನ್ಸರ್ ಸರ್ಜನ್ ಶಫಿ ಅಹ್ಮದ್ ಅವರು ವೈದ್ಯಕೀಯ ಇತಿಹಾಸದಲ್ಲೇ ಮೊದಲ ಬಾರಿಗೆ ಎಂಬಂತೆ 'ವರ್ಚುವಲ್ ರಿಯಾಲಿಟಿ' ಕ್ಯಾಮರಾ ಬಳಸಿ ಶಸ್ತ್ರಚಿಕಿತ್ಸೆ ಮಾಡಿದ್ದು ಯಶಸ್ವಿಯಾಗಿದೆ. ಮೆಡಿಕಲ್ ರಿಯಾಲಿಟಿ ವೆಬ್‌ಸೈಟ್ ಅಥವಾ ಆ್ಯಪ್ ಮೂಲಕ ಈ ಶಸ್ತ್ರಚಿಕಿತ್ಸಾ ಪ್ರಕ್ರಿಯೆಯನ್ನು ಆಸಕ್ತರು ನೋಡಬಹುದು.

'ರೊಬಾಟ್ ತಂತ್ರಜ್ಞಾನ ವೈದ್ಯಕೀಯ ರಂಗದಲ್ಲಿ ಪ್ರವೇಶಿಸಿ ಕ್ರಾಂತಿಯನ್ನೇ ಮಾಡುತ್ತಿದೆ. ಕ್ಯಾನ್ಸರ್ ರೋಗಿಗಳಿಗೆ ರೊಬಾಟ್ ಮೂಲಕ ಶಸ್ತ್ರಚಿಕಿತ್ಸೆಯನ್ನು ಅತ್ಯಂತ ಯಶಸ್ವಿಯಾಗಿ ನಡೆಸಿದ ಉದಾಹರಣೆ ನಮ್ಮ ರಾಜ್ಯದಲ್ಲೇ ಇದೆ. ಬೆಂಗಳೂರಿನ ಕಿದ್ವಾಯಿ ಸ್ಮಾರಕ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಕಳೆದ 2–3